# ಕನ್ನಡ ಕಥಾ ಸಾಹಿತ್ಯದಲ್ಲಿ ಸ್ತ್ರೀ ದೇಹ, ಲೈಂಗಿಕತೆ ಮತ್ತು ಆತ್ಮ ನಿರ್ಧಾರ: ಎಮ್. ಎಸ್. ವೇದಾ ಹಾಗೂ ಬಿ. ಟಿ. ಜಾಹ್ನವಿ ಅವರ ಕೃತಿಗಳ ವಿಶ್ಲೇಷಣಾತ್ಮಕ ಅಧ್ಯಯನ

**ನಂದಿನಿ ಎಸ್.[1] & ಶಿವಕುಮಾರ ಡಿ. ಸಿ.[2]**

[1]ಸಂಶೋಧನಾರ್ಥಿ, ಕನ್ನಡ ವಿಭಾಗ, ಜೈನ್ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ, ಬೆಂಗಳೂರು

[2]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೈನ್ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ, ಬೆಂಗಳೂರು

DOI: https://doi.org/10.5281/zenodo.17221664

## ABSTRACT:

ಕನ್ನಡ ಸಣ್ಣ ಕಥೆಯ ಬೆಳವಣಿಗೆಯಲ್ಲಿ ಮಹಿಳೆಯರ ಅಭಿವ್ಯಕ್ತಿ ಮಹತ್ವದ ಸಂಗತಿ. ನವೋದಯ ಸಂದರ್ಭದಲ್ಲಿ ಮಹಿಳೆಯರ ಅಭಿವ್ಯಕ್ತಿ ಪ್ರತಿಭಟನಾತ್ಮಕ ನೆಲೆಯಿಂದಲೇ ಪ್ರಾರಂಭವಾಗಿದೆ. ಹೆಣ್ಣಿನ ಚಿತ್ರವನ್ನು ಮತ್ತು ಮೂಲ ಹಕ್ಕುಗಳಿಂದ ಹೆಣ್ಣು ವಂಚಿತಳಾಗಿದ್ದನ್ನು, ಆದರ್ಶ ಮತ್ತು ಸಂಪ್ರದಾಯಗಳ ಒತ್ತಡಗಳಲ್ಲಿ ಅನುಭವಿಸುವ ಹಿಂಸೆಗಳನ್ನು ಕುರಿತು ಕಥೆಗಾರ್ತಿಯರು ಕಥೆಗಳಲ್ಲಿ ಪ್ರತಿಭಟನಾತ್ಮಕ ನೆಲೆಯಿಂದಲೇ ತಮ್ಮ ನೋವನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಪ್ರಗತಿಶೀಲ ಸಂದರ್ಭದಲ್ಲಿ ಮಹಿಳೆಯರ ಶೋಷಣೆ, ಲೈಂಗಿಕತೆ ಮತ್ತು ಕಾಮ ಮೂಲ ಶೋಷಣೆಯ ವಿಷಯಗಳ ಮೇಲೆ ಮಹಿಳೆಯ ವ್ಯಕ್ತಿತ್ವ ಮತ್ತು ಅಸ್ತಿತ್ವದ ಶೋಧ ನಡೆಯಿತು. ನವ್ಯದ ಆದಿಯಲ್ಲಿ ಅಸ್ತಿತ್ವವಾದ ಚಿಂತನೆಗಳು ಒಂದು ಬಗೆಯ ಆಂತರ್ಯದ ಮೂಲಕವೇ ಅವರ ಜಗತ್ತಿನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ಕ್ರಮವನ್ನು ಸಾಹಿತ್ಯ ಅಭಿವ್ಯಕ್ತಿಯಲ್ಲಿ ಹುಟ್ಟು ಹಾಕಿದವು. ಗಂಡಿನ ಅನ್ಯಾಯವನ್ನು ಧಿಕ್ಕರಿಸುವ ಎದೆಗಾರಿಕೆ ಹಾಗೂ ಸಂಪ್ರದಾಯ ಶರಣತೆಯ ನಿರಾಕರಣೆಯನ್ನು ಲೇಖಕಿಯರಾದ ಎಮ್. ಎಸ್. ವೇದಾ ಹಾಗೂ ಬಿ. ಟಿ. ಜಾಹ್ನವಿ ಅವರ ಕತೆಗಳಲ್ಲಿ ಕಾಣಬಹುದಾಗಿದೆ. ನಂತರ ದಲಿತ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಪುರುಷ ನಿರ್ಮಿಸಿದ ಚೌಕಟ್ಟನ್ನು ದಾಟಿ ಸಮಾನತೆಗಾಗಿ ಬಂಡೇಳುವ ಪಾತ್ರಗಳು ಬಿ. ಟಿ. ಜಾಹ್ನವಿ ಅವರ ಕಥೆಗಳಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದೆ. ದಲಿತಬಂಡಾಯ ಸಾಹಿತ್ಯದ ಧ್ಯೇಯ ಶೋಷಿತಪರ ಕಾಳಜಿಯಾಗಿದೆ. ಮಹಿಳೆಯರು ಜಾಗೃತಗೊಂಡು ತಾವು ಅನುಭವಿಸುವ ಶೋಷಣೆಯನ್ನು ಪ್ರತಿಭಟಿಸಬೇಕೆನ್ನುವುದನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಸಮಾನತೆಗಾಗಿ ಬಂಡೇಳುವ ಪ್ರತಿಗಾಮಿಗಳಾಗಿ, ಶೋಷಿತ ಮಹಿಳೆಯನ್ನು ಅವರ ಕಥೆಗಳಲ್ಲಿ ಜೀವಂತವಾಗಿ ಮೂಡಿಸಿದ್ದಾರೆ.

## KEYWORDS:

ಅಸ್ತಿತ್ವ, ಸಂಸ್ಕೃತಿ, ಲಿಂಗರಾಜಕಾರಣ, ಶಿಕ್ಷಣ, ಆರ್ಥಿಕತೆ, ಲೈಂಗಿಕತೆ, ವ್ಯಕ್ತಿತ್ವ.

ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ ಹತ್ತೊಂಬತ್ತನೇ ಶತಮಾನದ ಆರಂಭದಿಂದ ಈವರೆಗೂ ಕಥೆ ಲೇಖಕಿಯರ ಪ್ರಿಯವಾದ ಅಭಿವ್ಯಕ್ತಿ ಪ್ರಕಾರವಾಗಿ ಬೆಳೆದು ನಿಂತಿದೆ. ಪುರುಷ ಪ್ರಧಾನವೂ, ಪುರುಷ ಕೇಂದ್ರಿತವೂ ಆದ ಸಮಾಜದಲ್ಲಿ ಉತ್ಪನ್ನವಾದ ಸಾಹಿತ್ಯಕ್ಕಿಂತ ತೀರ ಭಿನ್ನ ದೃಷ್ಟಿಕೋನ ಮಹಿಳಾ ಬರವಣಿಗೆಯಲ್ಲಿ ವ್ಯಕ್ತವಾಗಿದೆ. ಪುರುಷನ ಅನುಭವಕ್ಕೆ ದಕ್ಕದ, ಸ್ತ್ರೀಯರು ಮಾತ್ರವೇ ಅನುಭವಿಸಿದ ಅಸಹನೀಯವಾದ ಅನೇಕ ವಿಚಿತ್ರ ಅನುಭವಗಳು ಮಹಿಳಾ ಸಾಹಿತ್ಯದಲ್ಲಿ ಕಾಣಿಸಿಕೊಂಡಿವೆ. ಸಮಾಜ ಮತ್ತು ಸಂಸ್ಕೃತಿಯಲ್ಲಿ ಕಂಡ ಪುರುಷನ ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಲಿಂಗರಾಜಕಾರಣ, ಸ್ತ್ರೀಯರ ನೋವುನಲಿವುಗಳನ್ನು, ಎದುರಿಸಿದ ಸಂಕಟಸವಾಲುಗಳನ್ನು ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ನಿರೂಪಿಸಿದ್ದಾರೆ. ಪುರುಷ ಕಥೆಗಾರರಿಗಿಂತ ಬೇರೆಯದೇ ಆದ ಅವಲೋಕನ, ವಿಶ್ಲೇಷಣೆ ಮಹಿಳೆಯರ ಕಥೆಗಳಲ್ಲಿದೆ. ಸಮಾಜವನ್ನು ಕುರಿತಂತೆ ಮಹಿಳೆಯರ ಕಥೆಗಳು ರಚಿತವಾಗಿದ್ದರೂ ಕುಟುಂಬ, ಸಮಾಜದಲ್ಲಿ "ಹೆಣ್ಣು" ಬದುಕುತ್ತಿರುವ ಬಗೆಯನ್ನು ಆಕೆ ಸೂಕ್ಷ್ಮವಾಗಿ ಗಮನಿಸಿದ್ದಾಳೆ. ಆ ನೆಲೆಯಲ್ಲಿ ಶಿಕ್ಷಣ, ಆರ್ಥಿಕತೆ, ಕೌಟುಂಬಿಕ ಸ್ಥಾನಮಾನಗಳು ನಿರ್ವಚಸಲ್ಪಟ್ಟಿವೆ. ಪುರುಷ ಪ್ರಣೀತ ವ್ಯವಸ್ಥೆಯನ್ನು ಒಪ್ಪಿಕೊಂಡೇ ಪ್ರತಿಭಟಿಸುವ, ಪ್ರಶ್ನಿಸುವ, ಅವಲೋಕಿಸುವ ನಿದರ್ಶನಗಳು ಈ ಕಥೆಗಾರ್ತಿಯರ ಕಥೆಗಳಲ್ಲಿವೆ.

ಆಧುನಿಕ ಕನ್ನಡ ಸಾಹಿತ್ಯದ ಮುಖ್ಯಘಟ್ಟ ದಲಿತ ಬಂಡಾಯ ಮತ್ತು ಸ್ತ್ರೀವಾದಿ ಸಾಹಿತ್ಯದಲ್ಲಿ ಸಣ್ಣ ಕಥೆಗಳನ್ನು ನಿರಂತರವಾಗಿ ರಚಿಸುತ್ತಾ ಬಂದಿದ್ದಾರೆ. ಭಾಷೆ ಮತ್ತು ಶೈಲಿ, ತಂತ್ರಗಳ ದೃಷ್ಟಿಯಿಂದ ಇವರ ಕಥೆಗಳಲ್ಲಿ ವಿಭಿನ್ನ ಪ್ರಯೋಗ ಮತ್ತು ವೈವಿಧ್ಯತೆಗಳು ವ್ಯಕ್ತವಾಗಿವೆ. ಈ ನಿಟ್ಟಿನಲ್ಲಿ ಕಥೆಗಾರ್ತಿಯರ ಕಥೆಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಮಹಿಳಾ ಬದುಕಿನ ಸಮಸ್ಯೆ ಸವಾಲುಗಳನ್ನು ಕಥಾ ಸಾಹಿತ್ಯದ ಮೂಲಕ ಈ ಲೇಖಕಿಯರು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪುರುಷ ಕೇಂದ್ರಿತವಾದ ಸಮಾಜದಲ್ಲಿ ಉತ್ಪನ್ನವಾದ ಸಾಹಿತ್ಯಕ್ಕಿಂತ ಭಿನ್ನ ದೃಷ್ಟಿಕೋನ ಮಹಿಳಾ ಸಾಹಿತಿಗಳ ಬರವಣಿಗೆಯಲ್ಲಿ ವ್ಯಕ್ತವಾಗಿದೆ. ಸ್ವಾತಂತ್ರ್ಯ ಪೂರ್ವದಿಂದ ಹೆಚ್ಚು ಪ್ರಮಾಣದಲ್ಲಿ ಕಾಣಿಸಿಕೊಳ್ಳತೊಡಗಿದ ಲೇಖಕಿಯರು, ಸಮಾಜ ಮತ್ತು ಸಂಸ್ಕೃತಿಯಲ್ಲಿ ಹಿಂದಿನವರೆಗೂ ಕಂಡ ಸ್ತ್ರೀಯರನ್ನು, ಎದುರಿಸಿದ ಸಂಕಟ ಸವಾಲುಗಳನ್ನು ತಮ್ಮ ತಮ್ಮ ಸಾಹಿತ್ಯಗಳಲ್ಲಿ ದಾಖಲಿಸಿದ್ದಾರೆ.

ಈ ಪ್ರಬಂಧವು ಎರಡು ನಿರೂಪಣೆಗಳಲ್ಲಿ ಚಿತ್ರಿಸಲಾದ ಪರಿಶುದ್ಧತೆ ಮತ್ತು ಸ್ತ್ರೀ ಲೈಂಗಿಕತೆಯ ಸಂದರ್ಭದಲ್ಲಿ ಪಿತೃಪ್ರಭುತ್ವದ ಮೌಲ್ಯಗಳು, ಮಹಿಳೆಯರ ಸಾಮಾಜಿಕ ನಿರೀಕ್ಷೆಗಳು ಮತ್ತು ಈ ಕಥೆಗಳಲ್ಲಿನ ಸ್ತ್ರೀ ಗುರುತಿನ ಸಂಕೀರ್ಣತೆಯನ್ನು

ಹೇಗೆ ಪ್ರತಿಬಿಂಬಿಸುತ್ತದೆ ಎಂಬುದನ್ನು ಇದು ಪರಿಶೋಧಿಸುತ್ತದೆ. ವಿವಾಹದ ಹೊರಗೆ ಆಕರ್ಷಣೆಯನ್ನು ಅನುಭವಿಸುವ ಮಹಿಳೆಯ ಸ್ಥಿತಿಯ ಬಗ್ಗೆ ತಿಳಿಯಬಹುದಾಗಿದೆ.

ಜಾಹ್ನವಿ ಅವರ ಮೊದಲ ಕಥಾಸಂಕಲನವಾದ 'ಕಳೆದುಕೊಂಡವಳು ಮತ್ತು ಇತರ ಕಥೆಗಳು' ಕೃತಿಯಲ್ಲಿ ವಿಮುಖ, ವ್ಯಭಿಚಾರ, ಅಜ್ಞಾತ, ಕಳೆದುಕೊಂಡವಳು, ಹೋರಾಟ, ಆಸರೆ, ತಾಯ್ತನ, ಒಳಗುದಿ, ಬಸವಿ ಮುಂತಾದ ಕಥೆಗಳಿವೆ. ಇವರು ಬರೆದಿದ್ದು ಕೆಲವೇ ಕಥೆಗಳಾದರೂ ಅವುಗಳಲ್ಲಿ ಗಂಡು ಹೆಣ್ಣಿನ ಸಂಬಂಧದ ಹಲವು ಸೂಕ್ಷ್ಮಗಳನ್ನು ಹಲವು ನೆಲೆಗಳಲ್ಲಿ ನೋಡಿರುವುದು ವಿಶೇಷ. ಮಧ್ಯಮ ವರ್ಗದ ಬದುಕುಬವಣೆ, ಪ್ರೇಮ ಪ್ರಕರಣ, ಸವಕಲು ಮಾತು, ಮಾಮೂಲಿ ನಿರೂಪಣೆಗಳು ಜೀವಂತವಾಗಿ ಕಾಣುತ್ತವೆ. ಇವರ ಬರಹಗಳಿಂದ ವಿಭಿನ್ನ ಲೋಕದ ಮಹಿಳಾ ಸಂವೇದನೆಗಳು ಕೂಡಿಕೊಂಡು ಕಥೆಗಾರ್ತಿಯರ ಅಭಿವ್ಯಕ್ತಿಗೆ ಹೊಸ ಆಯಾಮ ಬಂದಂತಾಯಿತು.

ಹೆಣ್ಣಿನ ಮನೋವ್ಯಾಪಾರದ ಸೂಕ್ಷ್ಮ ನೆಲೆಗಳ ಅನಾವರಣ ಜಾಹ್ನವಿ ಅವರ ಕಥಾಸಾಹಿತ್ಯದ ವಿಶೇಷ ಗುಣ. ಲೈಂಗಿಕತೆಯೂ ಬಂಧಿಸಲಾಗದಷ್ಟು ನಿರ್ಮಲ ಮನಸ್ಸಿನ ಪಾತ್ರ ಸೃಷ್ಟಿ ಇವರ ಕಾಣಿಕೆ. 'ಸಂಭೋಗ' ಸುಖವೂ ಬಿಡುಗಡೆಯ ಸಾಧ್ಯತೆ ಹೌದು; ಸ್ವಾತಂತ್ರ್ಯದ ನೆಲೆಯೂ ಹೌದು ಎಂಬುದನ್ನು ಕಥೆಗಾರ್ತಿ ಬಿಂಬಿಸಿರುವ ಬಗ್ಗೆ ಕುತೂಹಲ ಮೂಡಿಸುತ್ತದೆ. ವಿವಾಹ ಪೂರ್ವ, ವಿವಾಹ ನಂತರದ ಸಂಬಂಧಗಳು ಹೊಸ ಸಂಬಂಧಗಳಾಗಬಲ್ಲವು. ಕಾಮದ ಪ್ರಭಾವ ಪ್ರಬಲ ಕೀಳರಿಮೆಯಿಲ್ಲದೆ ಮೀರಲು ಸಾಧ್ಯ ಎಂಬುದನ್ನು ಇವರ ಕಥೆಗಳ ನಾಯಕಿ ತೋರಿದ್ದಾಳೆ. ಹೆಣ್ಣಿನ ಬಂಧನದ ಮೂಲಕ ಕಾರಣವಾದ ಶೀಲದ ಕಲ್ಪನೆಯನ್ನು ನಿರಾಕರಿಸಿರುವ ಇವರ ಗ್ರಹಿಕೆ ಹೊಸತು ಮತ್ತು ಧನಾತ್ಮಕವಾದುದು.

'ವಿಮುಖ' ಎಂಬ ಕಥೆಯಲ್ಲಿ ಗಂಡು ಹೆಣ್ಣಿನ ನಡುವೆ ಸಂಭವಿಸುವ ಪ್ರೇಮ, ಮದುವೆಯ ಆತ್ಮ ನಿರೀಕ್ಷೆಗಳು ಪ್ರಕಟವಾಗುತ್ತವೆ. ಈ ಕಥೆ ವೈವಾಹಿಕ ಸಂಬಂಧವನ್ನು ಅರ್ಥವತ್ತಾಗಿ ನಿರೂಪಿಸುತ್ತದೆ. ಕಥಾನಾಯಕಿ ಮೈತ್ರ ಉದ್ಯೋಗಸ್ಥ ಮಹಿಳೆ. ಇವಳ ಸಂಸಾರದ ಹೊಣೆಹೊತ್ತವನು ಅಪ್ಪನ ತಂಗಿಯ ಮಗ ರಘು. ಮೈತ್ರಾಳ ಅಕ್ಕನ ಮದುವೆ, ತಮ್ಮನ ವಿದ್ಯಾಭ್ಯಾಸ, ತನ್ನ ಕೆಲಸಕ್ಕೆ ಗಟ್ಟಿಯಾಗಿ ನಿಂತವನು ಈತ. ರಘು ತನ್ನ ಸ್ನೇಹಿತ ಭರತನಿಗೆ ಮದುವೆ ಮಾಡಿಸಲು ಯತ್ನಿಸುತ್ತಾನೆ. ಆದರೆ ಭರತ ತುಂಬಾ ಖಯಾಲಿ ಮನುಷ್ಯ. ಅವನಿಗೆ ತಂದೆತಾಯಿ, ಬಂಧು ಬಳಗ ಯಾರೂ ಇಲ್ಲ. ಆದರೆ ಅವನಿಗೆ ದಿನಕ್ಕೊಬ್ಬ ಹುಡುಗಿಯ ಶೋಕಿ ಇತ್ತು. ಹೆಂಡ ಕುಡಿಯುವುದು ಅವನ ನಿತ್ಯ ಕಾಯಕ. ಮೈತ್ರಾ ಅವರನ್ನು ಯಾವ ರೀತಿ ಆಯ್ಕೆ ಮಾಡಿಕೊಳ್ಳಬೇಕು ಎಂಬ ಆತಂಕ ಕಥೆಯ ತಿರುಳು. ಜೀವನದಲ್ಲಿ ಮದುವೆಯಾಗುವುದು ಒಂದೇ ಸಾರಿ ಅದಕ್ಕಾಗಿ

ಒಲ್ಲದ ವ್ಯಕ್ತಿಯನ್ನು ದೂರಸರಿಸಿ ತನಗೆ, ತನ್ನ ಬದುಕಿಗೆ ಸರಿಯಾದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಹೆಣ್ಣೊಬ್ಬಳ ಏಕಮುಖತೆಯನ್ನು ತಿಳಿಸುತ್ತದೆ.

ಈ ಕತೆಯಲ್ಲಿನ ರಘು, ಭರತ, ಮೈತ್ರಾಳ ರಸಿಕತೆ, ಒಂದು ರೀತಿಯ ಆಟ; ಸವಾಲಿದೆ, ಲೈಂಗಿಕ ಬಿರುಗಾಳಿಗೆ ಸಿಕ್ಕ ಹುಡುಗ ಸದಾ ಗೆಲ್ಲುತ್ತಾನೆ ಎನ್ನಲಾಗುವುದಿಲ್ಲ. ಸೋಲು ನಿಜಕ್ಕೂ ಸೋಲಾಗಿರುವುದಿಲ್ಲ. ಮೈತ್ರಾ ಬಲವಂತವಾಗಿ ಭರತನ ತೋಳಲ್ಲಿ ವಶವಾದದ್ದು, ಒಬ್ಬಳೇ ಇದ್ದಾಗ ಅವಳನ್ನು ತಡವಿದ ಆತ ಬಲಾತ್ಕರಿಸಿದ್ದು ಆಹ್ವಾನವೆನಿಸುತ್ತದೆ. ಆಕೆ ಸಮಾಧಾನ ಪಟ್ಟುಕೊಳ್ಳುತ್ತಾಳೆ. "ಬಲಾತ್ಕಾರದಿಂದ ನಡೆಯುವುದು ಅದೇ, ಒಪ್ಪಿಕೊಂಡರೆ ನಡೆಯುವುದು ಅದೇ" ಇದರಲ್ಲಿ ಸೇರಿರುವ ಸುಪ್ತವಾದ ದುರಾಸೆಯ ಕಾಮದ ಪರಕಾಷ್ಠೆ, ಅದರಿಂದಲೇ ಬರುವ ವಿಶಿಷ್ಟ ರೀತಿಯ ನಿಷ್ಠೆ. ಇದೆಲ್ಲ ಒಂದು ರೀತಿಯ ಕುತೂಹಲವನ್ನು ಕೆರಳಿಸುತ್ತದೆ. "ಯಾಕೆಂದರೆ ನನಗೆ ಬೇರೆ ದಾರಿ ಇರಲಿಲ್ಲ ನಾನು ಸಹಕರಿಸಿದೆ ಇದ್ದಿದ್ರೂ ನನ್ನೇನು ಅವನು ಬಿಡುತ್ತಿರಲಿಲ್ಲ" ಅದಕ್ಕೆ ಸಹಕರಿಸಿದೆ ಎನ್ನುವ ಆಕೆಯ ಮಾತು ಆಧುನಿಕತೆಗೆ ತೆರೆದುಕೊಂಡ ಮಹಿಳೆಯ ಮಾತಾಗಿದೆ. ಅತ್ಯಾಚಾರಕ್ಕೆ ಒಳಪಡುತ್ತಿರುವೆನೆಂದು ತಿಳಿದಿರುವ ಮೈತ್ರಾ ತನ್ನ ದೇಹದಲ್ಲಿ ಆಗುವ ಗಾಯಗಳಿಗೆ ಬದಲಾಗಿ ಸಂತೋಷದಿಂದ ಭರತನೊಂದಿಗೆ ಸಹಕರಿಸುತ್ತಾಳೆ. ಕೊನೆಗೆ ಭರತನು ಇದುವರೆಗೆ ಮಾಡಿದಂತಹ ತನ್ನ ತಪ್ಪನ್ನು ಮೈತ್ರಾಗೆ ಹೊಸ ಬಾಳು ನೀಡುವ ಮೂಲಕ ತನ್ನನ್ನು ತಾನು ಬದಲಾಯಿಸಿಕೊಳ್ಳುತ್ತಾನೆ.

ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರದಿಂದ ಆತ್ಮಸ್ಥೈರ್ಯ ಕಳೆದುಕೊಂಡು ಅದೆಷ್ಟು ಹೆಣ್ಣು ಮಕ್ಕಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಬೆರಳೆಣಿಕೆಯಷ್ಟು ಹೆಣ್ಣು ಮಕ್ಕಳು ಮಾತ್ರ ದಿಟ್ಟತನದಿಂದ ಸಮಾಜದಲ್ಲಿ ಹೆಜ್ಜೆಯನ್ನಿಡುತ್ತಿದ್ದಾರೆ. ಈ ಕಥೆಯ ನಾಯಕಿ ಮೈತ್ರಾ ಕೂಡ ಭರತನಿಂದ ಅತ್ಯಾಚಾರಕ್ಕೆ ಒಳಗಾದನೆಂದು ಆತ್ಮಹತ್ಯೆ ಮಾಡಿಕೊಳ್ಳಬಹುದಿತ್ತು. ಆದರೆ ಆಕೆ ಒಬ್ಬ ವಿದ್ಯಾವಂತೆ ಬಹಳ ದಿಟ್ಟತನದಿಂದ ಬದುಕು ಸಾಗಿಸುವವಳು ಎಂಬುದು ಆಕೆ ಮಾತಿನಿಂದ ತಿಳಿಯಬಹುದು. "ನಾನು ಹೋರಾಡಿದಷ್ಟು ಅವನು ಬಲವಾಗ್ತಿದ್ದ. ಅವನ ಆಸೆ ಹೆಚ್ಚಾಗುತ್ತಿತ್ತು. ಅಲ್ಲದೆ ಅವನ ಪ್ರಾಣ ತೆಗೆಯುವಷ್ಟು ಶಕ್ತಿ ನನಗಿಲ್ಲ. ಮತ್ತೆ ಇಂತಹ ಕ್ಷುಲ್ಲಕ ವಿಚಾರಕ್ಕೆ ಪ್ರಾಣ ತಗೊಳ್ಳುವಷ್ಟು ಮೂರ್ಖಳು ನಾನಲ್ಲ" ಎನ್ನುವ ಮೈತ್ರಾ ಮಾತು ಅವಳಲ್ಲಿನ ದಿಟ್ಟತನವನ್ನು ತೋರಿಸುತ್ತದೆ. ಹೆಣ್ಣು ಕೆಲವೊಂದು ಬಾರಿ ದೈಹಿಕವಾಗಿ ಬಲಹೀನಳಾಗಿರಬಹುದು ಆದರೆ ಸದಾಕಾಲ ಅವಳ ಮಾನಸಿಕ ಸ್ಥೈರ್ಯ ಜಾಗೃತವಾಗಿಯೇ ಇರುತ್ತದೆ. ಹೆಣ್ಣು ಅಬಲೆಯಲ್ಲ, ಸಬಲೆ ಎನ್ನುವ ಅವಳ ಆತ್ಮಸ್ಥೈರ್ಯವನ್ನು ಅವಲಂಬಿಸಿರುತ್ತದೆ. ಯಾರಿಂದ ತನ್ನ ಜೀವನ ಹಾಳಾಯಿತು ಆತನನ್ನು ಬದಲಾಯಿಸಿ ಹೊಸ ಬಾಳನ್ನು ಪಡೆದುಕೊಂಡ ಮೈತ್ರಾಳ ಜೀವನ ಹೊಸ ತಿರುವು ಪಡೆದಿದೆ.

'ವ್ಯಭಿಚಾರ' ಕಥೆ ಮನುಷ್ಯ ತಾನು ಬಯಸಿದ ಸುಖ ಸಿಗದೇ ಇದ್ದಾಗ ತನಗೆ ದೊರಕಬಹುದಾದ ಸುಖದ ದಾರಿಯನ್ನರಸಿ ಹೋಗುವುದನ್ನು ತಿಳಿಸುತ್ತದೆ. ಸಂಸಾರದಲ್ಲಿ ಗಂಡು ಹೆಣ್ಣು ತಮಗೆ ಸಿಗಬೇಕಾದ ಪ್ರೇಮಕಾಮಗಳ ಸಖ್ಯದಿಂದ ವಂಚಿತರಾದಾಗ ಅದನ್ನು ಬೇರೊಬ್ಬರಿಂದ ಪಡೆಯುವಂತದ್ದು ಕಥೆಯ ಕೇಂದ್ರ ಬಿಂದು. ಅದು ತಪ್ಪು, ನೈತಿಕತೆಯ ಎಲ್ಲೆಯನ್ನು ಮೀರಿದ್ದು ಎಂದು ತಿಳಿದಿದ್ದ ಕಥಾನಾಯಕಿಯೇ ಈ ತಪ್ಪನ್ನು ಕೊನೆಗೆ ಒಪ್ಪಿಕೊಳ್ಳುವುದು ನಿಜಕ್ಕೂ ಆಶ್ಚರ್ಯ. ತಾನು, ತನ್ನ ಗಂಡ, ಮಕ್ಕಳು ಎಂದಿದ್ದ ಲೀಲಾ ತನಗೆ ತನ್ನ ಗಂಡನಿಂದ ಸಿಗಬೇಕಾದ ಸುಖವು ಸಿಗದೇ ಕೊರಗಿ ಕೊನೆಗೆ ಅದನ್ನರಸಿ ಪರಪುರುಷನಲ್ಲಿ ಸಖ್ಯ ಬೆಳೆಸುತ್ತಾಳೆ. ಇದು ಮನೆಯ ಅಕ್ಕಪಕ್ಕದ ಹೆಂಗಸರಿಗೆ ತಪ್ಪೆನಿಸಿ ತುಚ್ಛವಾಗಿ ಮಾತನಾಡಿದರೂ ಅದಕ್ಕೆ ಕಿವಿಗೊಡದೆ ತನ್ನ ಸುಖಕ್ಕೆ ಹೆಚ್ಚು ಹೊತ್ತು ನೀಡುತ್ತಾಳೆ.

ಒಂದು ಸಂದರ್ಭದಲ್ಲಿ ಲೀಲಾ ಮಾಡುತ್ತಿರುವುದು ವ್ಯಭಿಚಾರವೆಂದು ಮಾತನಾಡುತ್ತಿದ್ದ ಸವಿ, ತಾನು ಆ ಸ್ಥಿತಿಯನ್ನು ತಲುಪಿದಾಗ ಆಕೆಯ ಮಾತುಗಳು ಲೀಲಾಳಿಗೆ ಪ್ರೋತ್ಸಾಹ ನೀಡುತ್ತದೆ. "ಯಾವುದು ವ್ಯಭಿಚಾರ? ಆ ಮುಚ್ಚಿದ ಬಾಗಿಲುಗಳ ಮರೆಯಲ್ಲಿ ಏನು ನಡೆಯುತ್ತಿದೆ ಅಂತ ನೋಡಿದರ್ಯಾರು? ಒಂದು ಹೆಣ್ಣು, ಗಂಡಿಗೆ ಏಕಾಂತದಲ್ಲಿ ಅದು ಬಿಟ್ಟರೆ ಬೇರೇನೂ ಇರುವುದಿಲ್ಲವಾ...? ಆಯ್ತು ನಿನ್ನ ಮಾತಿನಂತೆ ವ್ಯಭಿಚಾರನೇ ಆಗ್ಲಿ ಬರಿ ಲೀಲಕ್ಕನ ಬಗ್ಗೆ ಯಾಕೆ ಯೋಚಿಸ್ತಿ? ಆಕೆನ ಮಾತ್ರ ಯಾಕೆ ದೂಷಿಸ್ತಿ? ಬರಿ ದುಡ್ಡು ಮನೆ ಇದ್ಬಿಟ್ರೆ ಸಾಕಾ? ಮುತ್ತಿನಂತಹ ಮಕ್ಕಳು ನಿಜ ಆದರೆ ಮಕ್ಕಳು ಆಗ್ಬಿಟ್ರೆ ಎಲ್ಲಾ ಮುಗಿದೋಯ್ತಾ? ಲೀಲಕ್ಕನಿಗೂ ಚಿಕ್ಕ ವಯಸ್ಸು, ಮಕ್ಕಳಾದ ಮಾತ್ರಕ್ಕೆ ಗಂಡನ ಪ್ರೀತಿ ಪ್ರೇಮ ಅಪೇಕ್ಷಿಸೋದು ತಪ್ಪಾ?" ಎಂದು ಪ್ರಶ್ನಿಸುತ್ತಾಳೆ. ಸವಿ ಗಂಡನಿಂದ ಅನುಭವಿಸುತ್ತಿರುವ ನೋವು ಸಂಕಟಗಳನ್ನು ಸೂಜಿ ಹತ್ತಿರ ತೋಡಿಕೊಳ್ಳುತ್ತಾಳೆ, ಬಡತನದ ಬೇಗೆಯಲ್ಲಿರುವ ಹಲವಾರು ಹೆಣ್ಣು ಮಕ್ಕಳು ತಮ್ಮ ದೇಹವನ್ನು ಮಾರಿಕೊಂಡು ಅದರಿಂದ ಸಂಸಾರ ಸರಿದೂಗಿಸುತ್ತಿರುವುದು, ಇನ್ನೂ ಕೆಲವು ಹೆಣ್ಣು ಮಕ್ಕಳು ಗಂಡನ ಅನುಮಾನಕ್ಕೆ, ಸಂಶಯಕ್ಕೆ ಒಳಗಾಗಿ ಪರಪುರುಷನಲ್ಲಿ ಅನೈತಿಕ ಸಂಬಂಧ ಇಟ್ಟುಕೊಳ್ಳುವಂತಹ ಪ್ರಸಂಗಗಳು ಇವೆ. ಸಮಾಜಕ್ಕೆ, ಜನರ ಮಾತಿಗೆ ಅಂಜಿ ಗಂಡ ಏನೇ ಮಾಡಿದರೂ ಅವೆಲ್ಲವನ್ನು ಸಹಿಸಿ ಅವನೊಡನೆ ಹೆಜ್ಜೆ ಇಡುವಂತಹ ಸಾಧ್ವಿಯಂತ ಅಮಾಯಕರು ಇದ್ದಾರೆ. ಇಂದಿನ ನಗರೀಕರಣದ ಪರಿಸ್ಥಿತಿಯಲ್ಲಿ ನೈತಿಕತೆಅನೈತಿಕತೆ ಎಂಬ ಗೊಡವೆಯೇ ಇಲ್ಲದೆ ಕೇವಲ ತಮ್ಮ ಸುಖಕ್ಕಾಗಿ ಬದುಕುತ್ತಿರುವ ಸಮಾಜಕ್ಕೆ ಪ್ರೇಮಕಾಮಗಳ ವ್ಯತ್ಯಾಸ ತಿಳಿಯದು. ಕಾಮ ಎನ್ನುವುದು ಒಂದು ಅತೃಪ್ತಿಯಾಗಿ ಆಧುನಿಕ ಮನುಷ್ಯನ ವಿಚಿತ್ರವಾಗಿ ಅವನ ಮನೋವರ್ತನೆಗಳನ್ನು ನಿರ್ಣಯಕ್ಕೊಡ್ಡುವಂತೆ ಮಾಡುತ್ತಿದೆ.

ಕಾಮ ಮನುಷ್ಯ ಜೀವನದ ಅದಮ್ಯ ಒತ್ತಡ. ಅದು ದೊರಕದೆ ಇದ್ದಾಗ

ಅದನ್ನು ಪಡೆಯುವ ಸಲುವಾಗಿ ತಪ್ಪು ದಾರಿ ತುಳಿಯಲು ಹಿಂಜರಿಯುವುದಿಲ್ಲ. ಗಂಡಾಗಲಿ ಅಥವಾ ಹೆಣ್ಣಾಗಲಿ ಇಬ್ಬರು ತಪ್ಪು ದಾರಿ ಹಿಡಿಯುತ್ತಾರೆ ಎಂಬುದನ್ನು ಈ ಕಥೆ ತಿಳಿಸುತ್ತದೆ. ಮದುವೆಯಾದ ಹೊಸತರಲ್ಲಿ ಗಂಡು ಹೆಣ್ಣಿಗೆ ಎಲ್ಲವೂ ಚೆನ್ನ. ಆರಂಭದಲ್ಲಿ ಇರುವಂತ ಪ್ರೀತಿಯ ಮಾತುಗಳು ಮಕ್ಕಳಾದ ತರುವಾಯ ಆ ಪ್ರೀತಿ ಕಡಿಮೆಯಾಗುತ್ತದೆ. "ನೀನೊಬ್ಬಳೇ ಅಲ್ಲ ಮಕ್ಕಳನ್ನು ಹಡೆದಿರುವುದು ಪ್ರತಿಯೊಂದು ಹೆಣ್ಣು ಹಡಿತಾಳೆ" ಎನ್ನುವ ಶೇಖರ್ ಮಾತಿಗೆ ಸವಿ ಕುಗ್ಗಿ ಹೋಗುತ್ತಾಳೆ. ಮಕ್ಕಳನ್ನು ಹಡೆದು ಅದರ ಲಾಲನೆ ಪಾಲನೆಯಲ್ಲಿಯೇ ಮೈಮರೆಯುವ ಹೆಂಗಸರಿಗೆ ಗಂಡನ ಕಡೆ ಗಮನಹರಿಸುವುದು ಕಡಿಮೆಯಾಗಬಹುದು. ಹಾಗಂತ ಅವರ ಮೇಲೆ ಪ್ರೀತಿ ಕಡಿಮೆ ಆಗಿದೆ ಎಂದಲ್ಲ. ತಮ್ಮಿಬ್ಬರ ಸಮ್ಮಿಲನವೇ ಮತ್ತೊಂದು ಜೀವಿಯ ಸೃಷ್ಟಿ ಎಂಬ ಅರಿವಿದ್ದರೂ ಪರಸ್ಪರ ಮನಸ್ತಾಪಗಳು ಸಂಸಾರದಲ್ಲಿ ಮೂಡುತ್ತವೆ. ಇದರಿಂದ ಶೇಖರ್ ಸವಿಯ ಜೊತೆ ಇದ್ದಂತ ಕಳೆದ ಕ್ಷಣವೆಲ್ಲವನ್ನು ನೆನೆದು ಕೊರಗುತ್ತಾನೆ. ಆರಂಭದಲ್ಲಿ ಗಂಡನ ಮೇಲೆ ಇದ್ದಂತ ಪ್ರೀತಿ, ಪ್ರೇಮ ಮಕ್ಕಳಾದ ಮೇಲೆ ಕಡಿಮೆಯಾಯಿತು ಇದರಿಂದ ಬೇಸತ್ತ ಶೇಖರ್ ಸವಿಯನ್ನು ದ್ವೇಷಿಸಲು ತೊಡಗುತ್ತಾನೆ. ಗಂಡನ ಕಾಮದಾಸೆಯನ್ನು ಅರಿತ ಸವಿ ಗಂಡನ ಮನಸ್ಸನ್ನು ಒಲಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಅದು ಫಲಿಸುವುದೇ ಇಲ್ಲ. ಆಗ ನೆನಪಾಗುವುದು ವ್ಯಭಿಚಾರದ ಆಪಾದನೆ ಹೊತ್ತ ಲೀಲಕ್ಕ. ಆಕೆಯ ಸ್ಥಿತಿ ತನಗೂ ಒದಗಿದಾಗ ಮಾತ್ರ ಲೀಲಕ್ಕ ಮಾಡುತ್ತಿರುವುದು ಸರಿ ಎಂದು ಮನದಟ್ಟಾಗುತ್ತದೆ. ಹೆಣ್ಣಿಗೆ ಬಂಗಲೆ, ದುಡ್ಡು, ಮಕ್ಕಳು ಎಲ್ಲವೂ ಇದ್ದರೂ ಏನು ಪ್ರಯೋಜನ ಅವಳ ಗಂಡನ ಪ್ರೀತಿ, ಆಕೆಯ ಆಸೆಆಕಾಂಕ್ಷೆಯ ತೃಪ್ತಿ ಸಿಗದೇ ಇದ್ದಾಗ ಆಕೆಯ ಸ್ಥಿತಿ ನೀರಿನಿಂದ ತೆಗೆದ ಮೀನಿನಂತೆ ವಿಲವಿಲ ಒದ್ದಾಡುವಂತಾಗುತ್ತದೆ.

ಸಮಾಜದಲ್ಲಿ ಗಂಡು ಮದುವೆಯ ಆನಂತರ ಮತ್ತೊಂದು ಹೆಣ್ಣಿನೊಂದಿಗೆ ಸಂಬಂಧವನ್ನು ಇರಿಸಿಕೊಂಡರೆ ಅವನು ಗಂಡಸು ತಪ್ಪು ಮಾಡಿದರೂ ನಡೆಯುತ್ತದೆ ಎಂಬ ಧೋರಣೆ ಇದೆ. ಅದೇ ಹೆಣ್ಣು ಮದುವೆಯ ಆನಂತರ ತನ್ನ ಗಂಡನಿಂದ ಸಿಗದ ಸುಖವನ್ನು ಮತ್ತೊಬ್ಬನಲ್ಲಿ ಬಯಸಿದರೆ ಮಾತ್ರ ಅದು ಪಾಪ. ಹಾಗಾದರೆ ಗಂಡಿಗೆ ಮಾತ್ರ ಆಸೆ ಆಕಾಂಕ್ಷೆಗಳಿವೆ, ಹೆಣ್ಣಿಗಿಲ್ಲವೇ ಎಂಬ ಪ್ರಶ್ನೆಯನ್ನು ಕಥೆ ಮುಂದಿಡುತ್ತದೆ. ಜನ್ನನ ಯಶೋಧರ ಚರಿತೆಯ ಅಮೃತಮತಿ ಮಾಡಿದ್ದು ವ್ಯಭಿಚಾರವೇ? ಅವಳಿಗೆ ಅಷ್ಟಾವಂಕನಲ್ಲಿ ಉಂಟಾದದ್ದು ಕಾಮ ಮಾತ್ರವೇ ಎನ್ನುವ ಪ್ರಶ್ನೆಗಳಿಗೆ ಕೃತಿಯೇ ಉತ್ತರವನ್ನು ಒದಗಿಸುತ್ತದೆ. ಅಂದಿನ ಸಮಾಜದಲ್ಲಿ ಪರಪುರುಷರ ಸಂಗ ಅನೈತಿಕ, ಅಪರಾಧವೇ ಇರಬಹುದು. ಆದರೆ ಹೆಣ್ಣು ತಾನು ಇಚ್ಛಿಸಿದಂತೆ ಬದುಕುವ ಅರ್ಹತೆಯನ್ನು ಪಡೆದುಕೊಂಡಿಲ್ಲವೇ? ಸಮಾಜದ ಕಟ್ಟುಪಾಡನ್ನು ಮೀರಿ ತನ್ನ ಮನಸ್ಸಿನ ತೊಳಲಾಟವನ್ನು ಅದುಮಿಡದೇ ತಾನು

ಬಯಸಿದವನನ್ನು ಕೂಡಿದ ಅಮೃತಮತಿಯ ನಡೆ ದಿಟ್ಟತನವಾಗಿದ್ದರೂ, ಜಿಜ್ಞಾಸೆಗೆ ಒಳಪಡುವಂಥದ್ದು. ಇಂತಹ ಹತ್ತಾರು ಅಮೃತಮತಿಯರು ಪ್ರಸ್ತುತ ಕಥೆಯಲ್ಲಿ ಕಂಡುಬರುತ್ತಾರೆ. ಅವರ ಮಾನಸಿಕ ತೊಳಲಾಟವನ್ನು, ದೇಹದ ಬವಣೆಗೆ ಯಾವ ದಾರಿಯಾದರೂ ಸರಿಯನ್ನುವ ಹೆಣ್ಣುಗಳ ಒಳಾಂತರಂಗದ ಅನಾವರಣವನ್ನು ಈ ಕಥೆ ತೆರೆದು ತೋರಿದೆ.

ಎಂ. ಎಸ್. ವೇದ ಅವರು ತಮ್ಮ ಭಿನ್ನ ಅಭಿವ್ಯಕ್ತಿ ಶೈಲಿಯಿಂದ ಕಥಾ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಸ್ತ್ರೀ ಶೋಷಣೆ, ಬಡತನ, ಜೀವನ ಪ್ರೀತಿ, ವೃದ್ಧಾಪ್ಯ, ಮೂಢನಂಬಿಕೆ ಮುಂತಾದ ವಸ್ತುಗಳನ್ನು ತಮ್ಮ ಕಥೆಗಳ ಮೂಲಕ ಪರಿಣಾಮಕಾರಿಯಾಗಿ ಸೃಷ್ಟಿಸಿದವರು. ಇವರು ತಮ್ಮ ಕಥೆಗಳಲ್ಲಿ ಪ್ರಬಲ ಮತ್ತು ಸಬಲ ಸ್ತ್ರೀ ಮಾದರಿಗಳನ್ನು ಚಿತ್ರಿಸಿದ್ದಾರೆ. ಗ್ರಾಮ ಮತ್ತು ನಗರ ಜೀವನದ ತೊಳಲಾಟವನ್ನು ಇವರ ಕಥೆಗಳಲ್ಲಿ ಗುರುತಿಸುವುದು ಸಾಧ್ಯವಾಗಿದೆ. ಜೀವನ್ಮುಖಿ ಆಶಯಗಳ ಆಧುನಿಕ ಕಥೆ ಜಗತ್ತಿಗೆ ವಿಶಿಷ್ಟ ಸೇರ್ಪಡೆಗಳು ಎಂದರೆ ತಪ್ಪಾಗಲಾರದು.

'ಮಹಿಳೆಯರಿಗಾಗಿ ವೃತ್ತಿಗಳು' ಎಂಬ ತನ್ನ ಪ್ರಬಂಧದಲ್ಲಿ, ವರ್ಜೀನಿಯಾ ವೂಲ್ಫ್ ಪುರುಷರು ಸಾಮಾನ್ಯವಾಗಿ ಮಹಿಳೆಯ ಹಾದಿಯಲ್ಲಿ ಇರಿಸುವ ಎರಡು ಪ್ರಮುಖ ಅಡೆತಡೆಗಳನ್ನು ಗುರುತಿಸುತ್ತಾರೆ. ಇವುಗಳಲ್ಲಿ ಮೊದಲನೆಯದನ್ನು ವೂಲ್ಫ್ 'ಮನೆಯಲ್ಲಿ ದೇವತೆ' ಎಂದು ಕರೆಯುತ್ತಾರೆ. ವೂಲ್ಫ್ ಅವರ ದೃಷ್ಟಿಯಲ್ಲಿ, ವಿಕ್ಟೋರಿಯನ್ ಮಹಿಳೆಯನ್ನು ದೇಶೀಯ ವಲಯಕ್ಕೆ ಸೀಮಿತಗೊಳಿಸಲು ಮತ್ತು ಅವಳನ್ನು ನಿಯಂತ್ರಿಸಲು ಬಳಸಲಾಗುತ್ತಿದ್ದ ಸ್ವಯಂ ತ್ಯಾಗದ, ದೂರುದಾರ, ಶುದ್ಧ ಮಹಿಳೆಯ ಚಿತ್ರಣವು ಇಪ್ಪತ್ತನೇ ಶತಮಾನದವರೆಗೂ ಮಹಿಳಾ ಬರಹಗಾರ್ತಿಯನ್ನು ಕಾಡುತ್ತಲೇ ಇತ್ತು, ''ಸಹಾನುಭೂತಿಯುಳ್ಳವಳು; ಕೋಮಲಳು; ಹೊಗಳುವವಳು; ಮೋಸಗೊಳಿಸು; ಲೈಂಗಿಕತೆಯ ಎಲ್ಲಾ ಕಲೆಗಳು ಮತ್ತು ಕುತಂತ್ರಗಳನ್ನು ಬಳಸಿ. ಎಲ್ಲಕ್ಕಿಂತ ಹೆಚ್ಚಾಗಿ, ಶುದ್ಧಳಾಗಿರು'' ಎಂದು ಒತ್ತಾಯಿಸುತ್ತದೆ. ಒಬ್ಬ ವ್ಯಕ್ತಿಯಾಗಿ ತನ್ನ ಸ್ವಂತ ಗುರುತನ್ನು ಗ್ರಹಿಸುವ ಮಹಿಳೆಯ ಸಾಮರ್ಥ್ಯವು ಲಿಂಗಸೂಕ್ತ ನಡವಳಿಕೆಯ ಪಿತೃಪ್ರಭುತ್ವದ ನಿರ್ಮಾಣಗಳಿಂದ ಕಟ್ಟುನಿಟ್ಟಾಗಿ ವ್ಯಾಖ್ಯಾನಿಸಲ್ಪಟ್ಟಿದೆ. ಆದ್ದರಿಂದ, 'ಮನೆಯಲ್ಲಿ ದೇವತೆ' ಎಂಬುದು ಪುರುಷ/ಪಿತೃಪ್ರಭುತ್ವವು ಸ್ತ್ರೀ ಮನಸ್ಸಿನ ಮೇಲೆ ನಡೆಸುವ ನಿಯಂತ್ರಣದ ಸಂಕೇತವಾಗುತ್ತದೆ.

ಇಡೀ ಮನುಕುಲ ಹೆಣ್ಣು ಎಂಬ ಸೃಷ್ಟಿಯ ಆಧಾರದ ಮೇಲೆ ನಿಂತಿದೆ. ಮನುಕುಲದ ಬೆಳವಣಿಗೆಯಲ್ಲಿ ಹೆಣ್ಣುಗಂಡು ಆಧಾರ ಸ್ಥಂಭಗಳು. ಇಂತಹ ಹೆಣ್ಣುಗಂಡಿನ ಸಂಬಂಧದ ನಡುವೆ ಹಲವು ಮನೋದೈಹಿಕ ಎಳೆಗಳಿವೆ. ಆ ಎಳೆಗಳು ಅವರ ಬದುಕಿನ ಭಿನ್ನತೆಗೆ ಕಾರಣವಾಗಿದೆ. ನಮ್ಮ ಸಮಾಜವು ಹೆಣ್ಣುಗಂಡಿನ ಸೃಷ್ಟಿಯ

ಹಿಂದಿರುವ ನಿಯಮವನ್ನು ಮರೆತು ಅದಕ್ಕೆ ತನ್ನದೇ ಆದ ರೂಪ ನೀಡುತ್ತಾ ಬಂದಿದೆ. ಸಮತೂಕದಲ್ಲಿ ಸಾಗಬೇಕಾದ ಸಂಸಾರದ ಗಾಲಿಗೆ ಎಡರುತೊಡರುಗಳನ್ನು ನಿರ್ಮಿಸಿರುವುದು ಸಂಬಂಧದ ವೈಪರೀತ್ಯಕ್ಕೆ ಕಾರಣವಾಗಿದೆ. ಇಂತಹ ಸಂಗತಿಗಳನ್ನು ವೇದ ತಮ್ಮ ಸಣ್ಣ ಕಥೆಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ.

ವೇದ ಅವರ 'ಒಂಟಿ ಮೋಡಗಳು' ಮತ್ತು 'ಎಲ್ಲೋ ಜೋಗಪ್ಪ ನಿನ್ನ ಅರಮನೆ' ಸಣ್ಣ ಕಥೆಗಳು ಒಂದೇ ವಸ್ತುವಿನ ಭಿನ್ನ ಕತೆಗಳಾಗಿವೆ. ಒಂಟಿ ಮೋಡಗಳು ಕಥೆಯಲ್ಲಿ ನಾಗೇಂದ್ರಪ್ಪನ ಹೆಂಡತಿ ಎರಡು ಮಕ್ಕಳ ತಾಯಿ ಆಗಿದ್ದಾಗಿಯೂ ಟೈಲರ್ ವ್ಯಕ್ತಿಯೊಬ್ಬನ ಮೋಹಕ್ಕೆ ಸಿಕ್ಕಿ ಓಡಿ ಹೋಗುತ್ತಾಳೆ. ಅಂತೆಯೇ 'ಎಲ್ಲೋ ಜೋಗಪ್ಪ ನಿನ್ನ ಅರಮನೆ' ಕಥೆಯಲ್ಲಿಯೂ ರಾಮಯ್ಯನ ಹೆಂಡತಿ ಸರೋಜಮ್ಮ ಮಣಿಯಪ್ಪನೆಂಬ ವ್ಯಕ್ತಿಯೊಂದಿಗೆ ಹೊರಟು ಹೋಗುತ್ತಾಳೆ. ನಾಗೇಂದ್ರಪ್ಪನ ಹೆಂಡತಿ ಸುಖದ ಬದುಕು ಬದುಕಿದ್ದರೂ ಆಕೆಗೆ ಟೈಲರ್‌ನಲ್ಲಿ ಮೋಹ ಉಂಟಾಗುವುದು ಸ್ತ್ರೀಯ ಸ್ವೇಚ್ಛಾ ಮನೋವೃತ್ತಿಯನ್ನು ಪ್ರಕಟಿಸುತ್ತದೆ. ಇಷ್ಟಲ್ಲದೆ ಆಕೆಗೆ ವಯಸ್ಸಾದ ಕಾಲದಲ್ಲಿ ರೋಗಿಷ್ಟೆಯಾದ ಕಾರಣ ಟೈಲರ್ ಆಕೆ ಜವಾಬ್ದಾರಿ ಹೊರಲಾರದೆ ಮತ್ತೆ ಗಂಡನ ಮನೆಗೆ ತಂದು ಬಿಟ್ಟುಬಿಡುತ್ತಾನೆ. ಹೆಂಡತಿ ಕೊಟ್ಟು ಹೋದ ಆಘಾತವನ್ನು ಮರೆತಿದ್ದ ನಾಗೇಂದ್ರಪ್ಪನವರು ಹೆಂಡತಿಯ ಆಗಮನದಿಂದ ತತ್ತರಿಸಿ ಹೋಗುತ್ತಾರೆ. ಆಕೆ ಮಾಡಿದ ಅವಾಂತರದಿಂದ ನಾಗೇಂದ್ರಪ್ಪ ತಮ್ಮ ಬದುಕಿನಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಿರುತ್ತಾರೆ. ಆಕೆ ಮಾಡಿದ ದ್ರೋಹ ತಮ್ಮನ್ನೇ ಪ್ರಶ್ನಿಸಿಕೊಳ್ಳುವಂತೆ ಮಾಡಿದ ಸಂಗತಿ ನಾಗೇಂದ್ರಪ್ಪ ಮಾನವೀಯತೆಯ ನೆಲೆಯಿಂದ ಅವಳನ್ನು ಮನೆ ಒಳಗೆ ಸೇರಿಸಿಕೊಂಡರೂ ಮತ್ತೆ ಹೆಂಡತಿಯಾಗಿ ಸ್ವೀಕರಿಸುವುದಿಲ್ಲ. ಕಥೆಯ ವಿವರಣೆಯಂತೆ ಇದಕ್ಕೆ ಕೆಲವು ಕಾರಣಗಳನ್ನು ಕೊಡಬಹುದು. ಒಂದು ಆಕೆಯು ವಯೋವೃದ್ಧೆಯಾಗಿದ್ದುದು. ಮತ್ತೊಂದು ರೋಗಿಷ್ಟೆಯಾಗಿದ್ದುದು. ಇಷ್ಟಲ್ಲದೆ ನಾಗೇಂದ್ರಪ್ಪನ ಸಂಸ್ಕಾರವಂತ ಹೃದಯ ಆಕೆಯನ್ನು ಮತ್ತೆ ಸ್ವೀಕರಿಸಲು ಇಚ್ಛಿಸದಿದ್ದುದು ಮತ್ತು ಸಮಾಜದ ನಿಂದೆಯ ಭಯ ಇಲ್ಲಿ ನಾಗೇಂದ್ರಪ್ಪನು ಹೆಂಡತಿಯನ್ನು ತಿರಸ್ಕರಿಸಲು ಹಲವು ಕಾರಣ ಕೊಡಬಹುದಾದರೂ ಇದನ್ನು ಮೀರಿದ್ದು ಗಂಡಹೆಂಡತಿ ಸಂಬಂಧ. ಹೆಣ್ಣು ಗಂಡನ್ನು ಕ್ಷಮಿಸಬಹುದಾದರೆ, ಹೆಣ್ಣನ್ನು ಗಂಡು ಕ್ಷಮಿಸಲು ಏಕೆ ಸಾಧ್ಯವಿಲ್ಲ ಎಂಬ ಪ್ರಶ್ನೆ ಮೂಡದಿರದು. ಒಂದು ವೇಳೆ ಆತ ಕ್ಷಮಿಸಿದರೂ ಅದು ಮೇಲ್ನೋಟಕ್ಕೆ ಮಾತ್ರವೇ ಆಗಿರುತ್ತದೆ ಎಂಬ ವಾಸ್ತವಾಂಶವನ್ನು ಕಥೆ ವ್ಯಕ್ತಪಡಿಸುತ್ತದೆ.

ಹೆಣ್ಣಿನ ಸುತ್ತ ಔದಾರ್ಯದ ಉರುಳು ಬಿಗಿದು ಎತ್ತ ಹೋದರೂ ಉಸಿರುಗಟ್ಟಿಸುವಂತಹ ವಾತಾವರಣ ನಿರ್ಮಿಸಿ ಸಂಬಂಧವನ್ನು ಬಂಧನವಾಗಿರಿಸಿರುವ ವ್ಯವಸ್ಥೆಯ ತಂತ್ರವನ್ನು ವೇದ ತಮ್ಮ 'ಅನುಕ್ತ' ಕಥೆಯಲ್ಲಿ ಓದುಗರ ಮುಂದಿರಿಸಿದ್ದಾರೆ.

ತನ್ನ ಪ್ರೀತಿಯಲ್ಲಿ ಸ್ವಲ್ಪವೂ ದೋಷವಿರದ ಹಾಗೆ ದೀಪುವನ್ನು ಪ್ರೀತಿಸುತ್ತಿದ್ದ ಮಹೇಂದ್ರ ಅವಳ ಪಾಲಿನ ಸ್ವರ್ಗದ ಅಧಿಪತಿಯಾಗಿದ್ದ ಅಣ್ಣನ ಸಾವಿನ ಆಘಾತದಿಂದ ಹೊರಬರಲಾರದೆ ದೀಪು ಆತ್ಮಹತ್ಯೆಗೆ ಪ್ರಯತ್ನಿಸಿದಾಗ ನನ್ನನ್ನು ಅನಾಥ ಮಾಡಬೇಕೆಂದಿದ್ದೀಯಾ ದೀಪು? ಎಂದು ಬಿಕ್ಕಿಬಿಕ್ಕಿ ಅಳುವಷ್ಟು ಅವಳನ್ನು ಪ್ರೀತಿಸಿದ್ದ ಆದರೆ ಅಣ್ಣನ ಹೆಂಡತಿಗೆ ನೆರವಾಗಲು ಪ್ರಯತ್ನಿಸಿ ತಾರಾಳನ್ನು ಮನೆಗೆ ಕರೆತಂದ ದೀಪುವಿನ ಬದುಕಿನ ದಿಕ್ಕೇ ಬದಲಾಯಿತು. ಮಹೇಂದ್ರ ತಾರಾಳನ್ನು ಮೋಹಿಸಿದ್ದ. ಹರೆಯದಲ್ಲಿ ಗಂಡನನ್ನು ಕಳೆದುಕೊಂಡ ಅವಳಿಗೆ ಮಹೇಂದ್ರನ ಕಾರ್ಯ ತಪ್ಪೆನಿಸಲಿಲ್ಲ. ತಪ್ಪೇನಿದ್ದರೂ ಮಹೇಂದ್ರನದೇ ಆ ಪರಿಸ್ಥಿತಿಯಲ್ಲಿ ತಾರಾ ಅವನನ್ನು ವಿರೋಧಿಸಲಾಗಲಿಲ್ಲ. ಈ ವಿಷಯ ತಿಳಿದ ದೀಪು ಅತ್ತಿಗೆ ಎಂತಹ ಅಮಾಯಕಳು ನೀವು ದುರುಪಯೋಗ ಮಾಡಿಕೊಳ್ಳಬಾರದಿತ್ತು. ಹೆಣ್ಣಿನ ಅವಶ್ಯಕತೆ ಪೂರೈಸಲು ನಾನಿರಲಿಲ್ಲವಾ? ಅಥವಾ ಬೇಕಾದಷ್ಟು ವೇಶ್ಯಾಗೃಹಗಳಿರಲಿಲ್ಲವಾ?, ನಾನು ಇದನ್ನು ಕೇವಲ ನಿಮ್ಮ ದೈಹಿಕ ತೃಷೆ ಅಂದುಕೊಳ್ಳಲ್ಲ, ತಾರಾಳ ಬಗ್ಗೆ ನಿಮಗಿರುವ ಆಕರ್ಷಣೆ ಅಂತ ಭಾವಿಸ್ತೀನಿ. ನೀವು ಸಮಯ, ಸಂದರ್ಭ, ದೌರ್ಬಲ್ಯ ಅದೂ ಇದೂ ಅಂತ ಹೇಳಿ ಜಾರಿಕೊಳ್ಳಬಹುದು, ತಾರಾಳನ್ನೇ ದೂರಬಹುದು ಎಂದು ಹೇಳಿ ಮಹೇಂದ್ರನನ್ನು ತಾರಾಳೊಂದಿಗಾದರೂ ನಿಯತ್ತಿನಿಂದ ಬಾಳಲು ಹೇಳಿ ಸಂಬಂಧದ ಕೊಂಡಿ ಕಳಚಿಕೊಂಡು ಹೊರಟು ಹೋಗುತ್ತಾಳೆ. ಇಲ್ಲಿ ತಾರಾ ಪುರುಷನ ಆಕರ್ಷಣೆಗೆ ಒಳಗಾಗುವುದು ಸಹಜ ಆದರೆ ಮಹೇಂದ್ರನ ವಿಚಾರದಲ್ಲಿ ಹಾಗೆ ಹೇಳಲು ಬರುವುದಿಲ್ಲ. 'ಹೆಣ್ಣಿಗೆ ದೇಹ ದೌರ್ಬಲ್ಯವಾದರೆ, ಗಂಡಿಗೆ ಮನಸ್ಸೇ ದೌರ್ಬಲ್ಯ'. ಈ ದೌರ್ಬಲ್ಯವನ್ನು ನಾವು ಮಹೇಂದ್ರನಲ್ಲಿ ಗುರುತಿಸಬಹುದು. ಅವನ ಕಾಮಾಸಕ್ತಿಗೆ ಎಲ್ಲಾ ಅನುಕೂಲಗಳಿದ್ದಾಗಿಯೂ, ಆತ ತಾರಾಳನ್ನು ಬಯಸುವುದು ಹೆಣ್ಣಿನ ಅಸಹಾಯಕತೆಯ ಉಪಯೋಗ ಪುರುಷ ಪಡೆಯುವ ಮುಖದ ವಿಕೃತಿ. ಹೆಣ್ಣು ತನ್ನ ಪುರುಷನಿಗೆ ಬದ್ಧಳಾಗಿರುವಂತೆ ಪುರುಷ ಇರುವುದು ಕಷ್ಟವಲ್ಲವಾದರೂ ಹೆಣ್ಣಿನ ವಿಷಯದಲ್ಲಿ ದೌರ್ಬಲ್ಯವನ್ನೇ ಬೆಳೆಸಿಕೊಂಡು ಬರುತ್ತಿರುವ ಪುರುಷ ಸಮಾಜವನ್ನು ವೇದ ಅವರು ಇಲ್ಲಿ ಟೀಕಿಸಿದ್ದಾರೆ. ಪ್ರೀತಿ ಕೇವಲ ಸುಂದರ ಪದಗಳಲ್ಲಿ ಪೋಣಿಸಿದ ಮಾಲೆಯಾಗದೆ ತ್ರಿಕರಣ ಶುದ್ಧಿಯಾಗಿ ಒಬ್ಬರಲ್ಲೊಬ್ಬರು ಒಂದಾಗಬೇಕೆಂಬುದೇ ಈ ಕಥೆಯ ನೀತಿಯಾಗಿದೆ.

ಲಿಂಗ ದೃಷ್ಟಿಕೋನದಿಂದ ಕಥೆಗಳಲ್ಲಿ ಕಂಡುಬರುವ ಅತ್ಯಂತ ಪ್ರಸ್ತುತವಾದ ವಾದವೆಂದರೆ, "ಸುಂದರವಾದ ಹಾರವನ್ನು ಹೊಂದಿರುವ ಎದೆಯ ಕಲ್ಲಿನಿಂದ ಕೂಡಿದ ತನ್ನ ಗಂಡನನ್ನು ಕಳೆದುಕೊಂಡು, ಈ ಮಹಿಳೆ ತನ್ನ ಕಣಕಾಲಿನೊಂದಿಗೆ ತನ್ನ ವಿಜಯವನ್ನು ಗೆದ್ದಳು. ಅವಳ ಎದೆಯಿಂದ ನಡೆಸಲ್ಪಟ್ಟ ಈ ಯುದ್ಧವು ಅನ್ಯಾಯವೇ?" (1978: 304) ಎಂದು ಪೂಜಿಸುವ ಮೇಟ್ರನ್‌ಗಳು ಹೇಳಿದ ವಾಕ್ಯ.

ಇದು ಸಾಂಸ್ಕೃತಿಕ ಸಂದರ್ಭಗಳಲ್ಲಿ ಚಿಹ್ನೆಗಳ ಪ್ರಾಮುಖ್ಯತೆಯನ್ನು ಪುನರುಚ್ಚರಿಸುತ್ತದೆ ಮತ್ತು ಅವುಗಳನ್ನು ಸ್ತ್ರೀವಾದದೊಳಗಿನ ಸಾಧನವಾಗಿ ಅಥವಾ ಸಾಂಕೇತಿಕ/ ಪೌರಾಣಿಕವಾಗಿ., ಲಿಂಗ ದೃಷ್ಟಿಕೋನದಿಂದ ಅದನ್ನು ಹೇಗೆ ಅರ್ಥಮಾಡಿಕೊಳ್ಳುವುದು/ ಸಿದ್ಧಾಂತಿಸುವುದು? ಐತಿಹಾಸಿಕವಾಗಿ, ಮಹಿಳೆಯರ ಸ್ತನಗಳನ್ನು ಮಾತೃತ್ವ ಮತ್ತು ಕಾಮಪ್ರಚೋದಕ ಪದಗಳಲ್ಲಿ ನೋಡಲಾಗಿದೆ. ಸ್ತನಗಳು ಸಾಂಪ್ರದಾಯಿಕವಾಗಿ ಜನಪ್ರಿಯ ಮತ್ತು ಸಾಂಕೇತಿಕ ಭಾಷೆಯಲ್ಲಿ ಲೈಂಗಿಕತೆ ಅಥವಾ ಮಾತೃತ್ವದ ಸೂಚಕಗಳಾಗಿ ಮುಖ್ಯವಾಗಿವೆ. ಭಾರತೀಯ ಸನ್ನಿವೇಶದಲ್ಲಿಯೂ ಸ್ತನಗಳನ್ನು ಮಹಿಳೆಯ ಸ್ತ್ರೀತ್ವದ ಅತ್ಯಂತ ಗೋಚರ ಚಿಹ್ನೆ, ಅವಳ ಲೈಂಗಿಕತೆಯ ಸಂಕೇತ ಎಂದು ಪರಿಗಣಿಸಲಾಗುತ್ತದೆ, ಸ್ತ್ರೀ ದೇಹದ ಬಗ್ಗೆ ಮತ್ತು ಅದರ ಸುತ್ತಲಿನ ಚರ್ಚೆಗಳನ್ನು ಪಿತೃಪ್ರಧಾನ ಸಾಂಸ್ಕೃತಿಕ ರೂಢಿಗಳು ಹೆಚ್ಚಾಗಿ ನಿಷೇಧಿಸುತ್ತವೆ.

**ಪರಾಮರ್ಶನ ಗ್ರಂಥಗಳು:**

1. ಕರೀಗೌಡ ಬೀಚನಹಳ್ಳಿ (ಸಂ), (2020), ಸ್ವಾತಂತ್ರ್ಯೋತ್ತರ ಕನ್ನಡ ಕಥೆಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ.
2. ಅಮೂರ ಜಿ.ಎಸ್., (2012), ಕನ್ನಡ ಕಥನ ಸಾಹಿತ್ಯ, ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ವೇದಾ ಎಂ.ಎಸ್., (2010), ಪ್ರೀತಿ ಮತ್ತು ಸಾವು, ಸಂವಹನ ಪ್ರಕಾಶನ, ಮೈಸೂರು.
4. ವೇದಾ ಎಂ.ಎಸ್., (2010), ಮುಳ್ಳ ಮನೆಯ ಮೇಲೆ, ಸಂವಹನ ಪ್ರಕಾಶನ, ಮೈಸೂರು.
5. ಜಾಹ್ನವಿ ಬಿ.ಟಿ., (2023), ಒಬ್ರು ಸುದ್ಯಾಕೆ ಒಬ್ರು ಗದ್ಲ್ಯಾಕೆ, ಕೌದಿ ಪ್ರಕಾಶನ, ಬೆಂಗಳೂರು.
6. ಪ್ರಭಾವತಿ ಎಸ್.ವಿ., (2002), ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದೀ ನೆಲೆಗಳು, ರವಿ ಪ್ರಿಂಟರ್ಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.